ಅ) ವಿಧಾನ ಮಂಡಲ ತನ್ನ ವಿವೇಚನೆಗೊಳಪಟ್ಟು ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರ ಕಲಂ ಎ 7ನೇ ಅಡಿಯಲ್ಲಿ ಭೂ ಮಂಜೂರಾತಿಯನ್ನು ಮಾತ್ರ ಮಾಡಬೇಕೆಂದು ಶಾಸನ ಮಾಡಿರುತ್ತದೆ. ಇದರಡಿಯಲ್ಲಿ ಸ್ವೀಕೃತವಾದ 7ಎ ಅರ್ಜಿಗಳನ್ನು ಪರಿಗಣಿಸಲು ಉಪ ವಿಭಾಗಾಧಿಕಾರಿ ಅಥವಾ ತತ್ಸಮಾನ ಶ್ರೇಣಿಯ ಕಂದಾಯಾಧಿಕಾರಿಗಳನ್ನು ನಾಮೋದಿಷ್ಟ ಅಧಿಕಾರಿಯನ್ನಾಗಿ ನಿಯುಕ್ತಿಗೊಳಿಸಲಾಗಿದೆ.

ಆ) ಸದರಿ ಕಲಂನಲ್ಲಿ ಅವಕಾಶ ಇಲ್ಲದೇ ಇರುವುದರಿಂದ ಸಮಿತಿ ರಚಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಬೈಂದೂರಿನ ವಿಧಾನ ಸಭಾ ಕ್ಷೇತ್ರದಲ್ಲಿನ ದೇವಾಲಯಗಳ ದುರಸ್ಥಿ ನವನಿರ್ಮಾಣಕ್ಕೆ ಹಣ ಬಿಡುಗಡೆ

633 (288) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 2000-2001, 2001-2002, 2002-2003ನೇ ಸಾಲಿನಲ್ಲಿ ಇದುವರೆವಿಗೂ ರಾಜ್ಯದಲ್ಲಿನ ದೇವಾಲಯಗಳ ದುರಸ್ಥಿ ಮತ್ತು ನವ ನಿರ್ಮಾಣಕ್ಕೆ ಸಹಾಯಧನ ಕೋರಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು; (ವಿಧಾನ ಸಭಾ ಕ್ಷೇತ್ರವಾರು ಮಾಹಿತಿ ಒದಗಿಸುವುದು)

ಆ) ಇವುಗಳ ಪೈಕಿ ಸಹಾಯಧನ ಮಂಜೂರು ಮಾಡಲಾದ ಅರ್ಜಿಗಳ ಸಂಖ್ಯೆ ಮತ್ತು ಮೊತ್ತ ಎಷ್ಟು; (ವಿಧಾನಸಭಾ ಕ್ಷೇತ್ರವಾರು ಮಾಹಿತಿ ಒದಗಿಸುವುದು)

ಇ) ಬೈಂದೂರು ವಿಧಾನ ಸಭಾ ಕ್ಷೇತ್ರದಲ್ಲಿ ಈ ಕಾಮಗಾರಿಗಳಿಗೆ ಅತೀ ಕಡಿಮೆ ಹಣ ಬಿಡುಗಡೆ ಮಾಡಿ ತಾರತಮ್ಯ ಮಾಡಿರಲು ಕಾರಣಗಳೇನು; ಇದರ ಬಗ್ಗೆ ಸರ್ಕಾರದ ನಿಲುವೇನು?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು) :

ಅ) 2000 ರಿಂದ 2003ನೇ ಸಾಲಿನವರೆಗೆ ಧನ ಸಹಾಯ ಕೋರಿ ಬಂದ ಅರ್ಜಿಗಳ ಸಂಖ್ಯೆ ಈ ಕೆಳಕಂಡಂತಿರುತ್ತದೆ.

2000-2001	715
2001-2002	1077
2001-2003	591

ಆ) 2000-2001 ನೇ ಸಾಲಿನಲ್ಲಿ ಒಟ್ಟು 395 ಧಾರ್ಮಿಕ ಸಂಸ್ಥೆಗಳಿಗೆ ರೂ. 231.00 ಲಕ್ಷಗಳು, 2001-2002ನೇ ಸಾಲಿನಲ್ಲಿ 953 ಧಾರ್ಮಿಕ ಸಂಸ್ಥೆಗಳಿಗೆ ರೂ. 226.38 ಲಕ್ಷಗಳು ಅನುದಾನ ಬಿಡುಗಡೆ ಮಾಡಲಾಗಿದೆ.

2002-2003ನೇ ಸಾಲಿನಲ್ಲಿ ಇನ್ನೂ ಅನುದಾನ ಬಿಡುಗಡೆ ಮಾಡಿರುವುದಿಲ್ಲ.

(ಅನುದಾನ ಕೋರಿ ಬಂದ ಅರ್ಜಿಗಳ ಸಂಖ್ಯೆ, ಮಂಜೂರಾದ ಮೊತ್ತ, ಮಂಜೂರಾದ ಧಾರ್ಮಿಕ ಸಂಸ್ಥೆಗಳ ಜಿಲ್ಲಾವಾರು ವಿವರ ಅನುಬಂಧ - 1 ಮತ್ತು 2 ರಲ್ಲಿ ಲಗತ್ತಿಸಿದೆ)

ಇ) ಧಾರ್ಮಿಕ ಸಂಸ್ಥೆಯ ಮತಿಯಿಂದ ಜೀರ್ಣೋದ್ಧಾರ ಕಾಮಗಾರಿ ಕೈಗೊಂಡು ಅನುದಾನ ಕೋರಿಕೆ ಬಗ್ಗೆ ನಿಯಮಾನುಸಾರ ಧಾರ್ಮಿಕ ದತ್ತಿ ಆಯುಕ್ತರ ಮೂಲಕ ಸರ್ಕಾರದಲ್ಲಿ ಸ್ವೀಕೃತವಾದ ಧಾರ್ಮಿಕ ಸಂಸ್ಥೆಗಳಿಗೆ ಅನುದಾನ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

2000-01 ನೇ ಸಾಲಿನಲ್ಲಿ ಧಾರ್ಮಿಕ ಸಂಸ್ಥೆಗಳಿಗೆ ಅನುದಾನ ಕೋರಿದ ಬಂದ ಪ್ರಸ್ತಾವನೆಗಳ ಸಂಖ್ಯೆ ಅನುದಾನ ಮಂಜೂರಾದ ಮೊತ್ತ ಮತ್ತು ಅನುಧಾನ ಮಂಜೂರಾದ ಧಾರ್ಮಿಕ ಸಂಸ್ಥೆಗಳ ಸಂಖ್ಯೆ ಜಿಲ್ಲಾವಾರು ವಿವರ

ಅನುಬಂಧ - 1

ಕ್ರಮ ಸಂಖ್ಯೆ	ಜಿಲ್ಲೆಗಳು	ಅನುಧಾನ ಕೋರಿದ ಧಾರ್ಮಿಕ ಸಂಸ್ಥೆಗಳ ಸಂಖ್ಯೆ	ಅನುಧಾನ ಮಂಜೂರಾದ ಧಾರ್ಮಿಕ ಸಂಸ್ಥೆಗಳ ಸಂಖ್ಯೆ	ಮಂಜೂರಾದ ಮೊತ್ತ ರೂ ಲಕ್ಷಗಳಲ್ಲಿ
1)	ತುಮಕೂರು	46	24	10.35
2)	ಮೈಸೂರು	21	12	6.00
3)	ಬೆಂಗಳೂರು (ಗ್ರಾ)	25	17	6.60
4)	ಉತ್ತರಕನ್ನಡ	13	8	3.90
5)	ಕೋಲಾರ	19	21	9.55
6)	ಕೊಡಗು	15	11	6.50
7)	ಉಡುಪಿ	23	24	21.00
8)	ಗುಲ್ಬರ್ಗಾ	71	41	27.95
9)	ಬೆಳಗಾಂ	57	27	9.65
10)	ಗದಗ್	9	7	3.80
11)	ಶಿವಮೊಗ್ಗ	21	12	7.70
12)	ಬಳ್ಳಾರಿ	25	4	2.40
13)	ಬಾಗಲಕೋಟೆ	12	11	6.80
14)	ದಾರವಾಡ	27	17	12.05
15)	ಚಿತ್ರದುರ್ಗ	18	4	1.20
16)	ಹಾಸನ	60	19	8.75
17)	ದಾವಣಗೆರೆ	16	8	3.20
18)	ಹಾವೇರಿ	20	111	66..50
19)	ಬೆಂಗಳೂರು ನಗರ	20	20	112.255
20)	ಮಂಡ್ಯ	76	27	11.25
21)	ಚಿಕ್ಕಮಗಳೂರು	41	10	4.60
22)	ದಕ್ಷಿಣ ಕನ್ನಡ	27	30	34.50
23)	ಬೀದರ್	17	5	3.10
24)	ಚಾಮರಾಜನಗರ	6	3	1.30
25)	ಬಿಜಾಪುರ	17	11	6.60
26)	ರಾಯಚೂರು	7	4	1.60
27)	ಕೊಪ್ಪಳ	6	5	2.10
	ಒಟ್ಟು	715	395	231.00

2001-02ನೇ ಸಾಲಿನಲ್ಲಿ ರಾಜ್ಯ ಧಾರ್ಮಿಕ ಸಂಸ್ಥೆಗಳಿಗೆ ಅನುದಾನ ಕೋರಿದ ಬಗ್ಗೆ ಸರ್ಕಾರದಲ್ಲಿ ಸ್ವೀಕೃತವಾದ ಧಾರ್ಮಿಕ ಸಂಸ್ಥೆಗಳ ಸಂಖ್ಯೆ ಮಂಜೂರಾದ ಮೊತ್ತ ಮತ್ತು ಮಂಜೂರಾದ ಧಾರ್ಮಿಕ ಸಂಸ್ಥೆಗಳ ಸಂಖ್ಯೆ ಜಿಲ್ಲಾವಾರು ಪಟ್ಟಿ

ಅನುಬಂಧ - 2

ಕ್ರಮ ಸಂಖ್ಯೆ	ಜಿಲ್ಲೆಗಳು	ಅನುದಾನ ಕೋರಿ ಬಂದ ಧಾರ್ಮಿಕ ಸಂಸ್ಥೆಗಳ ಸಂಖ್ಯೆ	ಅನುದಾನ ಮಂಜೂರಾದ ಧಾರ್ಮಿಕ ಸಂಸ್ಥೆಗಳ ಸಂಖ್ಯೆ	ಮಂಜೂರಾದ ಮೊತ್ತ	02-03ನೇ ಸಾಲಿನಲ್ಲಿ ಅನುದಾನ ಕೋರಿ ಬಂದ ಪ್ರಸ್ತಾವನೆಗಳ ಸಂಖ್ಯೆ
1)	ಬೆಂಗಳೂರು ನಗರ	20	21	5.35	18
2)	ಬೆಂಗಳೂರು (ಗ್ರಾ)	87	37	7.60	56
3)	ಮಂಡ್ಯ	157	49	12.70	51
4)	ಮೈಸೂರು	20	24	6.00	8
5)	ಹಾಸನ	80	37	8.20	37
6)	ಶಿವಮೊಗ್ಗ	41	39	8.00	22
7)	ಚಿಕ್ಕಮಗಳೂರು	50	45	9.25	22
8)	ತುಮಕೂರು	136	86	16.25	52
9)	ಚಿತ್ರದುರ್ಗ	41	28	5.15	25
10)	ದಾವಣಗೆರೆ	33	34	7.80	21
11)	ಕೋಲಾರ	32	25	8.20	22
12)	ಚಾಮರಾಜನಗರ	13	14	3.15	7
13)	ಕೊಡಗು	23	34	8.28	39
14)	ದಕ್ಷಿಣ ಕನ್ನಡ	31	48	11.30	28
15)	ಬಳ್ಳಾರಿ	19	9	2.45	4
16)	ಉಡುಪಿ	39	36	6.60	21
17)	ಬೆಳಗಾಂ	39	45	7.90	30
18)	ದಾರವಾಡ	23	25	5.65	15
19)	ಬಿಜಾಪುರ	17	25	6.00	15
20)	ಉತ್ತರ ಕನ್ನಡ	49	31	6.55	7
21)	ಬಾಗಲಕೋಟೆ	9	7	2.60	14
22)	ಹಾವೇರಿ	26	36	6.55	16
23)	ಗದಗ್	6	39	6.70	8
24)	ರಾಯಚೂರು	11	39	7.30	4
25)	ಕೊಪ್ಪಳ	2	14	2.50	-

1	2	3	4	5	6
26)	ಬೀದರ್	16	10	2.50	18
27)	ಗುಲ್ಬರ್ಗಾ	57	112	18.85	31
28)	ಹೊರ ರಾಜ್ಯದಲ್ಲಿರುವ ಕರ್ನಾಟಕ ರಾಜ್ಯಪತ್ರಗಳಿಗೆ		3	4.00	-
29)	ಬೆಳಗಾಂ ವಿಭಾಗಕ್ಕೆ ಬಿಡುಗಡೆ ಮಾಡಿದ ಮೊತ್ತ			20.00	
	ಒಟ್ಟು	1077	953	226.38	591

ತಾಲ್ಲೂಕು ಕಛೇರಿ ಕಂಪ್ಯೂಟರ್ ನಿರ್ವಹಣೆಯಿಂದ ಸಂಗ್ರಹವಾಗುತ್ತಿರುವ ಹಣವನ್ನು ಜಿಲ್ಲಾಧಿಕಾರಿಗಳೇ ಉಪಯೋಗಿಸುವ ಅಧಿಕಾರ

634 (289) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತಾಲ್ಲೂಕು ಕಛೇರಿ ಕಂಪ್ಯೂಟರ್ ನಿರ್ವಹಣೆಯಿಂದ ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಸಂಗ್ರಹವಾಗುತ್ತಿರುವ ಯೂಸರ್ ಚಾರ್ಜ್‌ಗಳ ಮೊತ್ತವನ್ನು ಜಿಲ್ಲಾಧಿಕಾರಿಗಳೇ ಉಪಯೋಗಿಸಿಕೊಳ್ಳುವಂತೆ ಪ್ರಸ್ತಾವನೆ ಸರಕಾರದ ಪರಿಶೀಲನೆಯಲ್ಲಿದೆಯೆ ಹಾಗಿದ್ದಲ್ಲಿ, ಈಗ ಇದು ಯಾವ ಹಂತದಲ್ಲಿದೆ.

ಆ) ಭೂಮಿ ಕೇಂದ್ರಗಳಿಗೆ ಪೆಸಿಲಿಟಿ ಮ್ಯಾನೇಜರ್‌ಗಳನ್ನು ಒದಗಿಸಲು ಉದ್ದೇಶಿಸಿಲಾಗಿರುವುದು ಕಾರ್ಯರೂಪಕ್ಕೆ ಬಂದಿದೆಯೇ;

ಇ) ಇಲ್ಲದಿದ್ದರೆ, ಕಾರ್ಯರೂಪಕ್ಕೆ ಬಾರದಿರಲು ಕಾರಣಗಳೇನು;

ಈ) ಪಹಣಿ ಪತ್ರಕ್ಕೆ ಸಂಬಂಧಿಸಿದಂತೆ ಮುಂದಿನ ದಿನಗಳಲ್ಲಿ ಜಿಲ್ಲಾಧಿಕಾರಿಗಳು ಅವರ ಮಟ್ಟದಲ್ಲಿ ಸಂಗ್ರವಾದ ಯೂಸರ್ ಚಾರ್ಜ್ ಮೊತ್ತವನ್ನು ಉಪಯೋಗಿಸಿಕೊಳ್ಳಲು ಆದೇಶ ಹೊರಡಿಸಲಾಗಿದೆಯೇ;

ಉ) ಇಲ್ಲವಾದಲ್ಲಿ, ಕಾರಣಗಳೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ, (ಕಂದಾಯ ಸಚಿವರು) :

ಅ) ಯೂಸರ್ ಚಾರ್ಜ್‌ನ್ನು ಜಿಲ್ಲಾಧಿಕಾರಿಗಳು ನಿಶ್ಚಿತ ಠೇವಣಿಯಲ್ಲಿರಿಸಿರುತ್ತಾರೆ. ಈ ಮೊತ್ತವನ್ನು ಸರ್ಕಾರದ ಪ್ರದಾನ ಕಾರ್ಯದರ್ಶಿ ಕಂದಾಯ ಇಲಾಖೆ ಇವರ ನೇತೃತ್ವದಲ್ಲಿನ ನಿರ್ದೇಶನದ ಮೇರೆಗೆ ಜಿಲ್ಲಾಧಿಕಾರಿಯವರು ಭೂಮಿ ಯೋಜನೆಗೆ ಉಪಯೋಗಿಸಿಕೊಳ್ಳಬಹುದಾಗಿದೆ;

ಆ) ಸರ್ಕಾರವು ಫೆಸಿಲಿಟಿ ಮ್ಯಾನೇಜರನ್ನು ರಾಜ್ಯದಲ್ಲಿ ಈಗಾಗಲೇ ನೇಮಿಸಿದ್ದು, 2003ನೇ ಮಾರ್ಚ್ 1 ರಿಂದ ಕಾರ್ಯಾರಂಭವಾಗಿದೆ.

ಇ) ಪ್ರಶ್ನೆ (ಅ) ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಈ ಬಗ್ಗೆ ಆದೇಶ ಅನುಷ್ಠಾನದಲ್ಲಿದೆ.

ಉ) ಅನ್ವಯಿಸುವುದಿಲ್ಲ.